

ವಿಷಯ ತಿಳಿದು ಜನ ಬಸ್ಸು, ಲಾರಿ, ಆಟೋ, ಟ್ಯಾಕ್ಸಿ, ಎತ್ತಿನಗಾಡಿಗಳಲ್ಲದೆ ನಡೆದುಕೊಂಡು ಬೆತ್ತ ಜೋಳಿಗೆ ಹೊತ್ತುಕೊಂಡು 'ಉಘೇ ಉಘೇ ಮಂಟೆಲಿಂಗ' ಎಂದು ಘೋಷಣೆಗಳನ್ನು ಕೂಗುತ್ತಾ ಆದಾಗಲೇ ಬರಲಾರಂಭಿಸಿದ್ದರು. ದೇವಸ್ಥಾನದ ಬೀದಿ ಬೀದಿಗಳು ಬಣ್ಣ ಬಣ್ಣದ ರಂಗೋಲಿಗಳು, ತಳಿರು ತೋರಣಗಳು, ಸೀರಿಯಲ್ ಸೆಟ್‌ಗಳಿಂದ ಕಂಗೊಳಿಸುತ್ತಿದ್ದವು. ಪ್ರಾಣಿವಧೆ ನಿಷೇಧವಿದ್ದರೂ ಜನ ಹರಕೆಗೆಂದು ಆಟೋ ಟೆಂಪೋಗಳಲ್ಲಿ ಕುರಿ, ಆಡು, ಕೋಳಿಗಳನ್ನು ತಂದು ದೇವಸ್ಥಾನದಿಂದ ಹೊರಭಾಗದಲ್ಲಿ ಪಂಕ್ತಿಸೇವೆ ಮಾಡಲಾರಂಭಿಸಿದ್ದರು. ಡಿಸಿಯವರೇ ಖುದ್ದು ಜಾತ್ರೆಯಲ್ಲಿದ್ದುದರಿಂದ ಕಣ್ಣು ಬಿಟ್ಟಲ್ಲೆಲ್ಲಾ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಇತ್ತ ಉಗ್ರರೂಪ ತಾಳಿಕೊಂಡು ಕುಳಿತ್ತಿದ್ದ ಮಾದೇಶನಿಗೆ ಪೂಜಾರಿ ಬಸಯ್ಯನವರು ಕೈಗೊಳ್ಳಬೇಕಾದ ಪೂಜಾ ವಿಧಿವಿಧಾನಗಳ ಬಗ್ಗೆ ಎಲ್ಲವನ್ನು ಬಿಡಿಸಿ ಹೇಳತೊಡಗಿದರು. ಕಂಡಾಯದ ಪೂಜೆ, ಕೊಂಡದ ಪೂಜೆ ಇತ್ಯಾದಿಗಳ ವಿವರಗಳನ್ನು, ಚಂದ್ರಮಂಡಲ ಪೂಜೆಗೆ ಕೈಗೊಳ್ಳಬೇಕಾದ ಸಿದ್ಧತೆಗಳನ್ನು ಮನದಟ್ಟುಮಾಡಿಕೊಟ್ಟರು. ಪೂಜಾ ಕುಕ್ಕೆಯಲಿ ಇಟ್ಟದ್ದ ದೇವಸ್ಥಾನದ ಕೀಲಿಕೈಯನ್ನು ಮಾದೇಶನನಿಗೆ ಕೊಟ್ಟು 'ಒಳ್ಳೇದಾಗ್ಲಿ ನನ ಕಂದ' ಎಂದು ಸುಶೀಲಮ್ಮ ಮತ್ತು ಬಸಯ್ಯನವರು ಹರಸಿ ಅವನನ್ನು ಹೊಸ್ತಿಲವರೆಗೆ ಬೀಳ್ಕೊಟ್ಟರು. ದಾರಿಯುದ್ದಕ್ಕೂ ಈ ವಿಭೂತಿ, ಆ ಗಂಟೆ-ಜಾಗಟೆ, ಮಂಗಳಾರತಿ... 'ಛೇ...' ಎಂದು ಗೊಣಗಿಕೊಂಡೇ ಮಾದೇಶ ಗುಡಿಯತ್ತ ಹೆಜ್ಜೆ ಹಾಕಿದ.

ಸಂಜೆಯಾಗುತ್ತಿದ್ದಂತೆ ಜನ ತಂಡೋಪತಂಡವಾಗಿ ದೇವಸ್ಥಾನದ ಅಂಗಳದಲ್ಲಿ ಸೇರಲಾರಂಭಿಸಿದರು. ಧೂಪದ ಹೊಗೆ, ದೀಪದ ಹೊಗೆ ಆಕಾಶ ಮುಟ್ಟುತ್ತಿದ್ದವು. ಹೆಂಗಸರು ಮಕ್ಕಳು ಎನ್ನದೆ ಕೆಲವರು ವಾದ್ಯದ ಸದ್ದಿಗೆ ಹೆಜ್ಜೆ ಹಾಕಲಾರಂಭಿಸಿದರು. ಇನ್ನೂ ಕೆಲವರು ಯಾವುದರ ಪರಿವಿಲ್ಲದಂತೆ ದೂರದಲ್ಲಿ ಬೆಂಕಿ ಹಾಕಿ ಮಾಂಸದಡುಗೆ ಮಾಡಿ ಪಂಕ್ತಿ ಸೇವೆಗೆ ಅಣಿಯಾಗುತ್ತಿದ್ದರು. ಸುತ್ತಮುತ್ತಲಿನ ಊರಿನ ಗೌಡರು, ಪಟೇಲರು, ಶಾನುಭೋಗರು, ಕಂಡಾಯ ಹೊತ್ತವರು, ಬಾಯಿಬೀಗ ಹಾಕಿ ಹರಕೆ ಹೊತ್ತವರು, ಡಿಸಿ, ಎಸಿ, ಕ್ಷೇತ್ರದ ಎಂಎಲ್‌ಎ ಯವರು, ಹಿಂಡು ಹಿಂಡು ಪೊಲೀಸರು ಹೀಗೆ ದೊಡ್ಡ ದೊಡ್ಡವರೆಲ್ಲಾ ಸೇರಿದ್ದರು. ತೆಳ್ಳನೂರಿನ ಪಟೇಲ್ ಸುಬ್ಬಪ್ಪನವರು ಎಲ್ಲವನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು. ಕುರುಬನಕಟ್ಟೆಯಿಂದ ಕಂಡಾಯ ಹೊತ್ತುಕೊಂಡು ಪೂಜೆಗೆ ಎಂದು ಬಂದಿದ್ದ ಗುಡ್ಡರು ದೇವಸ್ಥಾನದ ಬಾಗಿಲ ಮುಂದೆಯೇ ಜಾಗ ಹಿಡಿದು ಕುಳಿತ್ತಿದ್ದರು. ಕೊಂಡಕ್ಕೆ ಹಾಕಿದ್ದ ಬೆಂಕಿ ನಿಗಿನಿಗಿ ಎಂದು ಬೇಯುತ್ತಿತ್ತು. ಎಲ್ಲರೂ ಗರ್ಭಗುಡಿಯ ಪೂಜೆಗೆ ಕಾಯುತ್ತಾ ಕುಳಿತಿದ್ದುದನ್ನು ಕಂಡ ಗೌಡರು 'ಸುಬ್ಬಪ್ನೋರೆ ಟೇಮಾಯ್ತು ಪೂಜೆ ಸುರ್ವಚ್ಕೋಕೇಳಿ' ಎಂದರು. ಸುಬ್ಬಪ್ಪನವರು ಓಡಿ ಬಂದು ದೇವಸ್ಥಾನದ ಒಳಹೊಕ್ಕಿ ನೋಡಿದರು. ಎಲ್ಲಿ ಹುಡುಕಿದರೂ ಮಾದೇಶನ ಸುಳಿವಾಗಲಿಲ್ಲ. ಸುಬ್ಬಪ್ಪನವರಿಗೆ ಆತಂಕ ಹೆಚ್ಚಾಯಿತು. ತಮ್ಮ ಮಗನನ್ನು ಕರೆದು ಅವನು ಎಲ್ಲಿದ್ದರೂ ಹುಡುಕಿ ಕರೆತರುವಂತೆ ತಿಳಿಸಿದರು. ದೇವಸ್ಥಾನದ ಸುತ್ತಮುತ್ತಾ ಎಲ್ಲೇ ಹುಡುಕಿದರು ಅವನು ಸುಳಿವೇ ಕಾಣಲಿಲ್ಲ. ಅಷ್ಟರಲ್ಲೇ ಬಂದ ಸಾರುತೋಟ ಸೀನ, 'ಅಯ್ಯೋ ಯೋಳಿ ಯೋಳಿ ಇನ್ನಾವ್ ಸೀಮೆ ಪೂಜೆ ಮಂಗಳಾರ್ತಿ, ಪೂಜಾರಪ್ಪ ಹೋಗಿ ಪಂಕ್ತಿ ಸೇವೆಲಿ ಉಣ್ಣೋಕ್ ಕುಂತವ್ನೆ' ಎಂದ. ಎಲ್ಲರೂ ಎದ್ದು ಬಿದ್ದು ದೂರದಲ್ಲಿ ನಡೆಯುತ್ತಿದ್ದ ಪಂಕ್ತಿ ಸೇವೆಯುತ್ತ ಓಡಿ ಬಂದರು. ಸಾಲುಗಟ್ಟಿದ ಪಂಕ್ತಿಯಲ್ಲಿ ಚಕ್ಕಂಬಟ್ಟೆ ಹಾಕಿ ಬಾಳೆ ಎಲೆಯಲ್ಲಿ ಬಡಿಸಿದ್ದ ಮಾಂಸದ ತುಂಡುಗಳನ್ನ ಮಾದೇಶ ಒಂದೊಂದಾಗಿ ಬಾಯಿಗಿರಿಸುತ್ತಿದ್ದ.

''ಅಯ್ಯಾ ಸಿದ್ಧಪಡಿಸಿದ ರಸವೋ
ಅದು ನಾಗರಾಜನ ಇಷವೊ
ಸಿದ್ದಯ್ಯ ಸ್ವಾಮಿ ಬನ್ನೋ
ಮಂಟೇದ ನಿಂಗಯ್ಯ ನೀವೇ ಬನ್ನೋ''

●